CC No.1231/23
CW-6 PW-3

**ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ**
**CC No : 1231/2023**

| | | |
|---|---|---|
| ಸಾಕ್ಷಿದಾರರ ಹೆಸರು | : | ರಮೇಶ |
| ತಂದೆಯ ಹೆಸರು | : | ಲೇ. ಪಾಪಣ್ಣ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಹೆಚ್.ಸಿ. ನಂಬರ್.19,<br>ಎಂ.ಕೆ. ದೊಡ್ಡಿ ಪೊಲೀಸ್ ಠಾಣೆ |
| ವಾಸಸ್ಥಳ | : | ಚನ್ನಪಟ್ಟಣ ಟೌನ್ |

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ: **ದಿಃ. 03.12.2025**

---

ನಾನು 2021ರಿಂದ 2024ರವರೆಗೆ ನಾನು ಚನ್ನಪಟ್ಟಣ ಪುರ ಪೊಲೀಸ್ ಠಾಣೆಯ ಪಿಎಸ್‌ಐರವರ ಜೀಪ್ ಚಾಲಕನಾಗಿ ಹೆಚ್.ಸಿ. ನಂಬರ್ 80 ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ05.04.2023ರಂದು ಬೆಳಿಗ್ಗೆ 11.00 ಗಂಟೆಯ ಸಮಯದಲ್ಲಿ ಚಾಸಾ.1ರವರು ನನಗೆ ತಿಳಿಸಿದ್ದೇನೆಂದರೆ, ಚನ್ನಪಟ್ಟಣದ ಕುವೆಂಪುನಗರದ 8ನೇ ಕ್ರಾಸ್ ಬಳಿ ಒಬ್ಬ ವ್ಯಕ್ತಿ ಚೀಲದಲ್ಲಿ ಮದ್ಯದ ಪ್ಯಾಕೆಟ್‌ಗಳನ್ನು ಹಿಡಿದುಕೊಂಡು ಹೋಗುತ್ತಿದ್ದಾನೆ, ಆತನ ಮೇಲೆ ದಾಳಿ ಮಾಡಬೇಕಾಗಿದೆ ಎಂದು ತಿಳಿಸಿರುತ್ತಾರೆ. ನಂತರ ನನ್ನ ಜೊತೆಯಲ್ಲಿ ಚಾಸಾ.4, ಚಾಸಾ.5 ಹಾಗೂ ಪಂಚರುದಾರರಾದ ಚಾಸಾ.2, ಚಾಸಾ.3 ಮತ್ತು ಚಾಸಾ.1ರವರುಗಳನ್ನು ನಮ್ಮ ಇಲಾಖಾ ಜೀಪು ಕೆಎ-42,ಜಿ-1145ನಲ್ಲಿ ಕೂತು ಕುವೆಂಪುನಗರದ 8ನೇ ಕ್ರಾಸ್ ಬಳಿ ಹೋಗಿರುತ್ತೇವೆ. ಸದರಿ ಚೀಲವನ್ನು ಹಿಡಿದುಕೊಂಡು ಹೋಗುತ್ತಿದ್ದ ವ್ಯಕ್ತಿಯನ್ನು ನಿಲ್ಲಿಸಿ ವಿಚಾರಿಸಿ ದಾಳಿ ಮಾಡಿದಾಗ ಆತನ ಬಳಿ 180 ಎಂ.ಎಲ್.ನ ಹಯ್‌ವರ್ಡ್ಸ್ ನ 24 ಪೌಚುಗಳು, 180 ಎಂ.ಎಲ್.ನ ಓಲ್ಡ್ ಟವರಿನ್ ನ 8 ಪೌಚುಗಳು, 650 ಎಂ.ಎಲ್.ನ 10 ಯು.ಬಿ. ಬಿಯರ್ ಬಾಟಲಿಗಳು ಇರುವುದು ಕಂಡುಬಂದಿರುತ್ತದೆ, ಸದರಿ ವ್ಯಕ್ತಿಯನ್ನು ವಿಚಾರಿಸಿ ಸದರಿ ಪ್ರಮಾಣದ ಮದ್ಯದ ಪೌಚುಗಳನ್ನು ಮತ್ತು ಬಿಯರ್ ಬಾಟಲುಗಳನ್ನು ಸಾಗಾಟ ಮಾಡಲು ಪರವಾನಗಿ ಇದೆಯಾ ಎಂದು ಕೇಳಿದಾಗ ಆತ ಇಲ್ಲ ಎಂದು ನುಡಿದಿರುತ್ತಾನೆ. ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸ ಕೇಳಲಾಗಿ ಆತನ ಹೆಸರು ಮಂಜುನಾಥ್, 31 ವರ್ಷ, ಪಟ್ಲು ಗ್ರಾಮ, ಚನ್ನಪಟ್ಟಣ ಎಂದು ನುಡಿದಿರುತ್ತಾನೆ. ನಂತರ ಪಂಚರುದಾರರ ಸಮಕ್ಷಮ ಸ್ಥಳದಲ್ಲಿ ಪಂಚನಾಮ ಕ್ರಮ ಕೈಗೊಂಡು ಸದರಿ ಆರೋಪಿತನಿಂದ ಸದರಿ ಮೇಲೆ ಹೇಳಿದ ಪ್ರಮಾಣದ ಮದ್ಯದ ಪೌಚುಗಳು ಮತ್ತು ಬಿಯರ್ ಬಾಟಲಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ನಂತರ ಸದರಿ ಆರೋಪಿಯನ್ನು ನಮ್ಮ

ಇಲಾಖಾ ಜೀಪಿನಲ್ಲಿ ಚಾಸಾ.1ರವರ ನಿಶದೇಶನದಂತೆ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿಯು ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿ ನೋಡಿ ಈತನೇ ಎಂದು ಗುರುತಿಸಿರುತ್ತಾರೆ. ಸದರಿ ಘಟನಾ ಸಂಬಂಧ ನಾನು ತನಿಖಾಧಿಕಾರಿಯ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ. ಮು.ಮಾ.1ರಿಂದ 3 ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ. ಎ.ಕೆ.ಎಂ., ವಕೀಲರಿಂದಃ**

ಚಾಸಾ.1ರವರು ದಾಳಿ ಮಾಡಲು ತನಗೆ ತಿಳಿಸಿರುತ್ತಾರೆಂದು ಹೇಳಿದ ಸಮಯದಲ್ಲಿ ತಾವು ಎಲ್ಲಿದ್ದಿರಿ ಎಂದು ಕೇಳಲಾಗಿ ಸಾಕ್ಷಿ ಠಾಣಾ ಕರ್ತವ್ಯದಲ್ಲಿ ಎನ್ನುತ್ತಾರೆ. ಚಾಸಾ.2 ಮತ್ತು 3 ಎಲ್ಲಿ ಇದ್ದರು ಎಂದು ಕೇಳಲಾಗಿ ಸಾಕ್ಷಿ ನಮ್ಮ ಪೊಲೀಸ್ ಠಾಣೆ ಹತ್ತಿರ ಬಂದಿದ್ದರು, ಅಲ್ಲಿಂದಲೇ ಜೀಪಿನಲ್ಲಿ ಕೂರಿಸಿಕೊಂಡು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿದ್ದೆವು ಎನ್ನುತ್ತಾರೆ. ಚಾಸಾ.2 ಮತ್ತು 3ರವರನ್ನು ಚಾಸಾ.1ರವರೇ ಬರಮಾಡಿಕೊಂಡಿರುತ್ತಾರೆ. ದಾಳಿ ಕರ್ತವ್ಯಕ್ಕೆ ಹೋಗಬೇಕಾದಲ್ಲಿ ಮೂಮೆಂಟ್ ರಿಜಿಸ್ಟರ್ ನಲ್ಲಿ ಸಹಿ ಮಾಡುತ್ತೀರಾ ಎಂದರೆ ಸಾಕ್ಷಿ ಲಾಗ್ ಬುಕ್ ನಲ್ಲಿ ಎಂಟ್ರಿ ಮಾಡುತ್ತೇವೆ ಎನ್ನುತ್ತಾರೆ. ಕುವೆಂಪುನಗರದ 8ನೇ ಕ್ರಾಸ್ ನಲ್ಲಿ ಆರೋಪಿ ಬಸ್ಸನ್ನು ಹತ್ತಲು ನಿಂತಿದ್ದ ಎಂದು ಹೇಳಿದ್ದು ಅಲ್ಲಿ ಯಾವುದೇ ಬಸ್ ನಿಲ್ದಾಣ ಇಲ್ಲ ಎಂದರೆ ಸಾಕ್ಷಿ, ಚನ್ನಪಟ್ಟಣ ನ್ಯಾಯಾಲಯದ ಎದುರು ಬಸ್ಸನ್ನು ನಿಲ್ಲಿಸುತ್ತಾರೆ, ಅಲ್ಲಿ ಬಸ್ ಹತ್ತಲು ನಿಂತಿದ್ದ ಎಂದು ಹೇಳುತ್ತಾರೆ. ಆರೋಪಿತನ ಮೇಲೆ ದಾಳಿ ಮಾಡಿದ್ದೇವೆಂದು ತಾವು ಹೇಳಿದ್ದು ಫೋಟೋ ಅಥವಾ ವಿಡಿಯೋ ಮಾಡಿದ್ದೀರಾ ಎಂದು ಕೇಳಲಾಗಿ ಸಾಕ್ಷಿ ಮಹಜರ್ ಮಾಡುವ ಕಾಲಕ್ಕೆ ಫೋಟೋ ತೆಗೆದಿರುತ್ತೇವೆ ಎಂದು ಹೇಳುತ್ತಾರೆ. ಚಾಸಾ.1ರವರು ನಮ್ಮ ಠಾಣೆಯ ಮೇಲಧಿಕಾರಿ ಇದ್ದು ಠಾಣೆಯ ಅಂಕಿ-ಅಂಶ ತೋರಿಸಲು ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು ಆ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ.1ರವರ ಜೊತೆ ಯಾವುದೇ ದಾಳಿಗೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ದಾಳಿ ಮಾಡಿಲ್ಲ, ತನಿಖಾಧಿಕಾರಿಯ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.